INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-5, Issue -5, September-October, 2023,
PageNo,21-29
Peer -Reviewed, Refereed Journal

# ಕೃಷ್ಣರಾಜನಗರ ತಾಲೋಕು ಪ್ರದೇಶದಲ್ಲಿ ಗಂಗರ ಆಳ್ವಿಕೆ ಕುರಿತ ಸ್ಥೂಲನೋಟ

ಡಾ.ದಿಲೀಪ್.ಎಸ್.[1]

ಕರ್ನಾಟಕ ರಾಜ್ಯದ ದಕ್ಷಿಣ ಭಾಗದಲ್ಲಿ ಸರಿಸುಮಾರು ಕ್ರಿ.ಶ. 4ನೇ ಶತಮಾನದ ಮಧ್ಯಭಾಗದಿಂದ 10ನೇಶತಮಾನದ ಅಂತ್ಯದವರೆಗೆ ಆಳ್ವಿಕೆಯನ್ನುಮಾಡಿರುವ ತಲಕಾಡಿನ ಗಂಗರು ಪಶ್ಚಿಮ ಗಂಗರು ಎಂದೂ ಕೂಡ ಪ್ರಸಿದ್ಧರಾಗಿದ್ದಾರೆ.ಗಂಗರ ರಾಜ್ಯವನ್ನು ಗಂಗವಾಡಿ 96,000 ಎಂದು ಶಾಸನಗಳಲ್ಲಿ ಕರೆಯಲಾಗಿದೆ. [1] ಗಂಗರು ತಮ್ಮ ರಾಜಧಾನಿಯನ್ನು ಆಡಳಿತದ ಅನುಕೂಲಕ್ಕೆ ತಕ್ಕಂತೆ ಬದಲಿಸುತ್ತಿದ್ದರು.ಪ್ರಾರಂಭದಲ್ಲಿಕೋಲಾರ, ಅನಂತರ ತಲಕಾಡು ಕೆಲಕಾಲ ಬೆಂಗಳೂರು ಜಿಲ್ಲೆ ಮತ್ತು ಮಣ್ಣೆ ಇವರರಾಜಧಾನಿಗಳಾಗಿದ್ದವು.ಗಂಗರ ವಂಶದ 3ನೇ ರಾಜನಾದ ಹರಿವರ್ಮನ ಒಂದು ಶಾಸನ **'ತಲಕಾಡು'** ಅವರ ರಾಜಧಾನಿಯಾಗಿತ್ತೆಂದು ಅಧಿಕೃತವಾಗಿ ತಿಳಿಯುತ್ತದೆ.ಸ್ಥಳ ಪುರಾಣಗಳಪ್ರಕಾರ ತಲಕಾಡು ಆ ಕಾಲದಲ್ಲಿ ಅಭಯಾರಣ್ಯವಾಗಿದ್ದು ಗಜಾರಾಣ್ಯವೆಂದು ಪ್ರಸಿದ್ಧವಾಗಿತ್ತು.ಆದ್ದರಿಂದ **ಮದಗಜ** ಗಂಗರ ಲಾಂಛನವಾಗಿದೆ.ಗಂಗರು ಕದಂಬ ಮನೆತನದ ಸಮಕಾಲದಲ್ಲಿಆಡಳಿತ ನಡೆಸುತ್ತಿದ್ದು ಕ್ರಿ.ಶ. 350 ರಿಂದ 550ರ ವರೆಗೆ ಸ್ವಾತಂತ್ರ್ಯರಾಗಿ ಆಡಳಿತಲೀನರಾಗಿನಡೆಸಿದರು.ಕೃಷ್ಣರಾಜನಗರ ತಾಲೋಕು ಪ್ರದೇಶದಲ್ಲಿನ ಗಂಗರ ಶಾಸನಗಳು ದೊರೆತಿವೆ. ಈ ಮುಂದಿನಂತೆ ಅವುಗಳ ಆಧಾರದಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ.

ಗಂಗರ ಮೂಲದ ಬಗೆಗೆ ಕ್ರಿ.ಶ. 10ನೇ ಶತಮಾನದಿಂದೀಚಿನ ಶಾಸನಗಳಲ್ಲಿಮಾತ್ರ ಕಂಡುಬರುತ್ತವೆ. ಅವುಗಳ ಪ್ರಕಾರ; ಗಂಗರು ಮೊದಲು ಅಯೋಧ್ಯಯಲ್ಲಿಆಳುತ್ತಿದ್ದರೆಂದು,ಅನಂತರ ಆಹಿಚ್ಛತ್ರಕ್ಕೆ ಹೋದರೆಂದೂ, ತರುವಾಯ ದಡಿಗ ಮತ್ತು ಮಾಧವಎಂಬ ಇಬ್ಬರು ರಾಜಕುಮಾರರು ದಕ್ಷಿಣದಲ್ಲಿರುವ ಗಂಗಪೇರುಂಗೆ ವಲಸೆ ಬಂದು ನಂದಗಿರಿಮತ್ತು ಕುವಲಾಲಪುರ ಎಂಬ ಮುಖ್ಯನಗರಗಳನ್ನು ಒಳಗೊಂಡ ಗಂಗವಾಡಿ ತೊಂಬತ್ತಾರುಸಾವಿರ ಪ್ರಾಂತ್ಯದಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸಿದರೆಂದು ತಿಳಿದುಬರುತ್ತದೆ.ಸ್ವಲ್ಪಕಾಲಾನಂತರಅವರು ತಮ್ಮ ರಾಜಧಾನಿಯನ್ನು ಕುವಲಾಲಪುರದಿಂದ ಮಣ್ಣೆಗೂ ನಂತರ ತಲಕಾಡಿಗು ಬದಲಾಯಿಸಿದರು.[2]

---

**1. ಸಹಾಯಕ ಪ್ರಾಧ್ಯಾಪಕರು,ಇತಿಹಾಸ ವಿಭಾಗ,ಕ.ರಾ.ಮು.ವಿ.ಮೈಸೂರು**

ಗಂಗರು ತಾವು ಇಕ್ಷ್ವಾಕು ವಂಶದ ಅರಸನ ಮಕ್ಕಳೆಂದು ಕರೆದುಕೊಂಡಿದ್ದರಿಂದ ಆಂಧ್ರದಲ್ಲಿ ಶಾತವಾಹನರ ಅನಂತರ ಆಳ್ವಿಕೆಯನ್ನು ನಡೆಸಿ ಇಕ್ಷ್ವಾಕುಗಳ ಸಂಬಂಧಿಗಳಾಗಿರಬಹುದೆಂದು 10ನೇ ಶತಮಾನದಲ್ಲಿ ಬರೆದ ಪಲ್ಲವ ಶಾಸನದಂತೆಅಯೋಧ್ಯೆಯ ಇಬ್ಬರು ರಾಜಪುತ್ರರು ಈಗಿನ ಕಡಪ ಜಿಲ್ಲೆಯ ಗಂಗಪೇರೂರಿನಲ್ಲಿರಾಜ್ಯವೊಂದನ್ನು ಸ್ಥಾಪಿಸಿ ಮುಂದೆ ಕೋಲಾರದಲ್ಲಿ ಆಳಲಾರಂಭಿಸಿದರು ಎಂದು ಉಲ್ಲೇಖಿತಗೊಂಡಿರುತ್ತದೆ. ಮೊದಲು ಪೇರೂರಿನಿಂದ ಆಳುತಿದ್ದ, ಮುಂದೇ ಕೋಲಾರವನ್ನುರಾಜಧಾನಿಯನ್ನಾಗಿ ಮಾಡಿಕೊಂಡರು.ಮೊದಲು ವೈಧಿಕರಾಗಿದ್ದು ಕಾಲನಂತರ ಜೈನರಾದರು.ಕದಂಬರಂತೆ ಇವರು ಪಲ್ಲವರ ಸಾಮಾಂತಿಕೆಯನ್ನು ಪ್ರತಿಭಟಿಸಿ ಸ್ವಾತಂತ್ರ್ಯರಾದರು.[3]

ಗಂಗರ ವಂಶದ ಮೂಲಪುರುಷ ಕೋಂಕಣಿವರ್ಮ.ಇವನು ಸರಿಸುಮಾರು ಕ್ರಿ.ಶ. 325ರಲ್ಲಿ ತನ್ನ ಆಳ್ವಿಕೆಯನ್ನು ಪ್ರಾರಂಭಿಸಿದನು. ಎಂ.ವಿ. ಕೃಷ್ಣರಾವ್ ಅವರು ಗಂಗರ ವಂಶವಾಳಿಯ ಬಗೆಗೆ ಬರೆಯುತ್ತಾ ದಡಿಗ ಮತ್ತು ಮಾಧವರು ಅಣ್ಣ ತಮ್ಮಂದಿರೆಂದೂದಡಿಗನೇ ಕೊಂಕಣಿವರ್ಮನೆಂದು ಗುರುತಿಸುತ್ತಾರೆ.ಬಹುತೇಕ ಶಾಸನಗಳಲ್ಲಿ ಇವನನ್ನುಗಂಗವಂಶದ ಮೂಲಸ್ಥಾಪಕನಂತೆ ವರ್ಣಿಸಿವೆ. ಇವನು ಕ್ರಿ.ಶ. 350 ರಿಂದ 400ರವರೆಗೆಆಡಳಿತ ನಡೆಸಿದನು.ಅವನ ಅನಂತರ ಮಗ ಒಂದನೇ ಮಾಧವ ಕ್ರಿ.ಶ 400 ರಿಂದ 440ರವರೆಗೆಆಡಳಿತ ನಡೆಸಿದನು.ಈ ಮಾಧವನ ಬಗೆಗೆ ಮೈಸೂರು ತಾಮ್ರಶಾಸನ ತಿಳಿಸುತ್ತದೆ.ಈಶಾಸನದಲ್ಲಿ ಮೊದಲು ಕೊಂಕಣಿವರ್ಮನನ್ನು ಹೆಸರಿಸಿ ಅನಂತರ ಮಾಧವವರ್ಮನನ್ನುವರ್ಣಿಸಲಾಗಿದೆ.ಕೊಂಕಣಿ ವರ್ಮನು ಚುರುಕು ಬುದ್ದಿಯುಳ್ಳವನು ನಾನಾ ಶಾಸ್ತ್ರಗಳನ್ನು ಆಳವಾಗಿ ಅಧ್ಯಯನ ಮಾಡಿ ಸುಗುಣ ಸಂಪನ್ನನಾಗಿದ್ದನು.ಅನೇಕ ಯುದ್ದಗಳನ್ನು ಜಯಿಸಿಕೀರ್ತಿಶಾಲಿಯಾದವನು ಎಂದು ತಿಳಿಸುತ್ತದೆ.[4]

ಒಂದನೇಯ ಮಾಧವ ವರ್ಮನಿಗೆಹರಿವರ್ಮನೆಂಬ ಮಗನಿದ್ದನು.ಇವನಿಗೆ ಆರ್ಯವರ್ಮ ಅಥವಾ ಕೃಷ್ಣವರ್ಮ ಎಂಬ ಹೆಸರುಇತ್ತು.ಇವನು ಕ್ರಿ.ಶ. 440ರಲ್ಲಿ ಅಧಿಕಾರಕ್ಕೆ ಬಂದನು. ಹರಿವರ್ಮನ ಅನಂತರ ಮಗ ಇಮ್ಮಡಿಮಾಧವ ಕ್ರಿ.ಶ. ಸುಮಾರು 465ರಲ್ಲಿ ಪಟ್ಟಕ್ಕೆ ಬಂದನು. ಇವನನ್ನು ಪಲ್ಲವ ಸ್ಕಂಧವರ್ಮನುಸಿಂಹಾಸನಕ್ಕೆ ಕುಳ್ಳಿರಿಸಿದನು.ಇಮ್ಮಡಿ ಮಾಧವನ ಅನಂತರ ಅವನ ಮಗ ವಿಷ್ಣುಗೋಪನು ಅಧಿಕಾರಕ್ಕೆ ಬಂದನು.ಮುಂದೆ ಇದೇ ವಿಷ್ಣುಗುಪ್ತನ ಮಗ ಮುಮ್ಮಡಿ ಮಾಧವ ರಾಜನಾದನು.ಇವನನ್ನು ಕೆಲವು ಶಾಸನಗಳಲ್ಲಿ ತಡಂಗಾಲ ಮಾಧವನೆಂದು ಬರೆದಿದೆ.ಈ ಬಿರುದುತಡಂಗಾಲ ಪೊಯ್ದಡಗಿಸುವ ಮಾಧವನೆಂದು ಕರೆದಿದೆ.ಇವನು ಸುಮಾರು ಕ್ರಿ.ಶ. 480 ರಿಂದ 495ರವರೆಗೆ ರಾಜ್ಯವಾಳಿದನು. ಇವನ ಕಾಲ ಗಂಗರ ಇತಿಹಾಸದಲ್ಲಿ ಬದಲಾವಣೆಯಕಾಲವಾಗಿತ್ತು. ಇವನು ಕದಂಬರ ಕೃಷ್ಣವರ್ಮನ ತಂಗಿಯನ್ನು ಮದುವೆಯಾಗಿದ್ದಂತೆಬಹುತೇಕ ಶಾಸನಗಳು ತಿಳಿಸುತ್ತವೆ. ಮುಮ್ಮಡಿ ಮಾಧವನ ತ್ರೈಂಬಕ್‌ದೇವರ ಚರಣಗಳೆಂಬಕಮಲಗಳ ಪರಾಗದಿಂದ ಪವಿತ್ರವಾದ ಶರೀರವನ್ನು ಹೊಂದಿದ್ದನು.ಸ್ವಂತ

ಭುಜಬಲದಿಂದರಾಜ್ಯವನ್ನು ಗಳಿಸಿದನು ಎಂದು ಶಾಸನಗಳು ತಿಳಿಸುತ್ತವೆ.ಮುಮ್ಮಡಿ ಮಾಧವನ ಮಗ ಅವಿನೀತನು ಬಾಲಕನಾಗಿದ್ದಾಗಲೇ ಪಟ್ಟವೇರಿ ಸುಮಾರು 469 ರಿಂದ 529ರವರೆಗೆ ರಾಜ್ಯವಾಳಿದನು.ಇವನು ಅಶ್ವಮೇಧಯಾಗ ಮಾಡಿ ತಲಕಾಡನ್ನುತನ್ನ ಕಾಯಂ ರಾಜಧಾನಿಯನ್ನಾಗಿ ಮಾಡಿಕೊಂಡನು.ಇವನು ಪುನ್ನಾಡುರಾಜಕುಮಾರಿಯನ್ನು ಮದುವೆಯಾಗಿದ್ದಂತೆ ಶಾಸಗನಳು ತಿಳಿಸುತ್ತವೆ. ಬೆಂಗಳೂರಿನ ರೆಸಿಡೆನ್ಸ್ ಶಾಸನದಲ್ಲಿ ಈತನು ಶೈಶವದಲ್ಲಿಯೇ ಪಟ್ಟಕ್ಕೆ ಬಂದನು ಎಂದು ಹೇಳಿದೆ.[5]ಇವನು ಮುಂದೆ ತನ್ನ ಕಿರಿಯ ಮಗನಿಗೆ ಪಟ್ಟ ಕಟ್ಟಲು ಮಾಡಿದ ಪ್ರಯತ್ನವನ್ನು ಹಿರಿಯ ಮಗನಾದದುರ್ವಿನೀತನು ವಿಫಲಗೊಳಿಸಿ ಅಧಿಕಾರಕ್ಕೆ ಬಂದನು.

ದುರ್ವಿನೀತನು ಗಂಗದೊರೆ.ಅವನೀತ ಮತ್ತು ಜೇಷ್ಠದೇವಿಯ ಮಗ.ಅವನೀತನು ತನ್ನ ಮತ್ತೊಬ್ಬ ರಾಣಿಯ ಮಗನಿಗೆ ಪಟ್ಟಕ್ಕೆ ತರಲು ಪ್ರಯತ್ನಿಸಿದನು.ಇದರಿಂದದುರ್ವಿನೀತನು ಆಲತ್ತೂರು, ಪರುಳರ ಮತ್ತು ಪೆನ್ನಗರಗಳಲ್ಲಿ ಯುದ್ಧ ಮಾಡಿ ಕ್ರಿ.ಶ. 529ರಲ್ಲಿ ಅಧಿಕಾರಕ್ಕೆ ಬಂದನು.ಮುಮ್ಮಡಿ ಸ್ಕಂಧವರ್ಮನ ಮಗ ರಪಿವತ್ತನು ಕ್ರಿ.ಶ. 550ರ ಮೊದಲೇತೀರಿಕೊಂಡಿದ್ದರಿಂದ ಮತ್ತು ಇದಕ್ಕೆ ವಾರಸುದಾರರಿಲ್ಲದ್ದರಿಂದ ಇಮ್ಮಡಿ ಸ್ಕಂದವರ್ಮನತಂಗಿಯ ಮಗನಾದ ದುರ್ವಿನೀತನಿಗೆ ಪನ್ನಾಡು ಪ್ರಾಂತ್ಯ ದೊರೆಯಿತು.ದುರ್ವಿನೀತನತಗಕೆಯ ಶಾಸನದಲ್ಲಿ ಬರೆದಿರುವ **'ಸಂಯತಿ ಅರಿನರಪದುರ್ವಿನೀತಃ'** ಎಂದು ಯುದ್ಧದಲ್ಲಿಶತ್ರುರಾಜನಿಗೆ ಬಗ್ಗದವನು ಎಂಬರ್ಥ ಬರುತ್ತದೆ. ನರಸಿಂಹ ರಾಜಪುರ ಶಾಸನದಲ್ಲಿಬರೆದಿರುವ **'ದುರ್ವಿನೀತ ಕಲೌದುವಿದ್ ನೀತಃ'** ಅಂದರೆ ದುಷ್ಟರಿಗೆ ದುಷ್ಟನೆಂದು ತಿಳಿಸುತ್ತದೆ. [6] ದುರ್ವಿನೀತನನ್ನು ಗುಮ್ಮರೆಡ್ಡಿಪುರದ ಶಾಸನದಲ್ಲಿ ವೃಷ್ಣಿಕುಲತಿಲಕನಾದ ಕೃಷ್ಣಸಮನೆಂದು ಕೃಷ್ಣಕುಲದವನೆಂದೂ ಹಿರಣ್ಯಗರ್ಭಾಯಾಗ ಮಾಡಿದನೆಂದು ಹೇಳಿದೆ.

ದುರ್ವಿನಿತನಿಗೆ ಮೂರು ಜನ ಗಂಡು ಮಕ್ಕಳಿದ್ದರೆಂದು ಸಿರಗುಂದ ಶಾಸನವು ಉಲ್ಲೇಖಿಸಿರುತ್ತದೆ. ಈ ಪೈಕಿ ಇಬ್ಬರ ಹೆಸರು ತಿಳಿದಿದೆ.ಅವನೇ ಮುಷ್ಕರ ಮತ್ತು ಪೊಲವೀರರು ದುರ್ವಿನೀತನ ಅನಂತರ ಮುಷ್ಕರನು 579 ರಿಂದ 604ರವರೆಗೆ ಆಡಳಿತ ನಡೆಸಿದನು.ಅನಂತರ ಸಹೋದರಪೋಲವೀರ 604 ರಿಂದ 629ರವರೆಗೆ ಆಡಳಿತ ನಡೆಸಿದನು.ಅನಂತರ ಮುಷ್ಕರನ ಮಗ ಶ್ರೀವಿಕ್ರಮನು 644 ರಿಂದ 669ರವೆಗೆ ಆಡಳಿತ ನಡೆಸಿದನು.ಶ್ರೀವಿಕ್ರಮನ ಅನಂತರ ಅವನ ಮಗಭೂ ವಿಕ್ರಮ 669 ರಿಂದ 679ರವರೆಗೆ ಆಡಳಿತ ನಡೆಸಿದನು.ಇವನು ಪ್ರಭಾವಶಾಲಿಯಾಗಿದ್ದು, ಪಲ್ಲವೇಂದ್ರನನ್ನು ವಿಳಂದೆ ಎಂಬಲ್ಲಿ ಸೋಲಿಸಿದನು ಎಂದು ಹಳ್ಳಿಗೇರಿ ಶಾಸನವು ದಾಖಲೀಕರಿಸಿರುತ್ತದೆ.

ಭೂ ವಿಕ್ರಮನ ಸಹೋದರ ಒಂದನೇ ಶಿವಮಾರನು.ಈತನಿಗೆ ಕ್ರಿ.ಶ. 679ರಲ್ಲಿ ಪಟ್ಟಾಭಿಷೇಕವಾದ ಬಗೆಗೆ ಹಳ್ಳಿಗೇರಿ ಶಾಸನವುಉಲ್ಲೇಖಿಸಿರುತ್ತದೆ.ಇವನ ಆಳ್ವಿಕೆಯ 21ನೇ ವರ್ಷದಲ್ಲಿ ಪಲ್ಲವರ ಆಕ್ರಮಣ ನಡೆಯಿತು.ಆದರೆ, ಶಿವಮಾರನು ತನ್ನ ಶಕ್ತಿ ಸಾಮಥ್ಯಗಳಿಂದಗಂಗ ರಾಜ್ಯವನ್ನು ರಕ್ಷಿಸಿದನು.ಸೌಮ್ಯ

ಸ್ವಭಾವದ ಶಿವಮಾರನು **ಅವನಿ ಮಹೇಂದ್ರ, ಶಿಷಂಔಪ್ರಿಯಃ**ಮತ್ತು **ನವಕಾಮ**ಎಂಬಂತಹ ಹೆಸರುಗಳಿಂದಲೂ ಕೂಡಈತನು ಪ್ರಸಿದ್ಧಿಯಾಗಿದ್ದನು.[7] ಒಂದನೇಶಿವಮಾರನ ಕಾಲದಲ್ಲಿ ಪಲ್ಲವ 2ನೇ ನರಸಿಂಹ ವರ್ಮನ ಮೊಮ್ಮಕ್ಕಳು ಹಾಗು ಮಹೇಂದ್ರವರ್ಮನ ಮಕ್ಕಳಾದ ಬಾಲಕರಾದ **ಜಯ** ಮತ್ತು **ವೃದ್ಧಿ** ಎಂಬುವವರು ಆಡಳಿತ ನಡೆಸುತ್ತಿದ್ದರು.ಆದರೆ 2ನೇನರಸಿಂಹವರ್ಮನ ಇನ್ನೊಬ್ಬ ಮಗ 2ನೇ ಪರಮೇಶ್ವರ ವರ್ಮ ಪಲ್ಲವ ಸಿಂಹಾಸನವನ್ನುಆಕ್ರಮಿಸಿದನು.ಒಂದನೇ ಶಿವಮಾರನು 46 ವರ್ಷಗಳ ಕಾಲ ರಾಜ್ಯಭಾರ ಮಾಡಿದನು.ಇವನ ಕಾಲದಲ್ಲಿದೊರೆತಿರುವ ಶಾಸನಗಳು ಕಡಿಮೆ.ಆದ್ದರಿಂದಲೇ ಹೆಚ್ಚಿನ ವಿವರಗಳು ದೊರೆಯುವುದಿಲ್ಲ ಎಂಬುದನ್ನು ಗುರುತಿಸಲಾಗಿದೆ.

ಒಂದನೇ ಶಿವಮಾರ ಅನಂತರ ಅವರ ಮೊಮ್ಮಗನಾದ ಶ್ರೀಪುರುಷನು ಕ್ರಿ.ಶ. 725ರಲ್ಲಿ ಅಧಿಕಾರಕ್ಕೆ ಬಂದನು.ಸಾಲಿಗ್ರಾಮದ ತಾಮ್ರ ಶಾಸನವು ಕ್ರಿ.ಶ. 725ರಲ್ಲಿ ಶ್ರೀಪುರುಷನ ಆಳ್ವಿಕೆಯ ಮೊದಲ ವರ್ಷಕ್ಕೆ ಸೇರಿದುದಾಗಿದೆ.ಈ ಶಾಸನವು ಶ್ರೀಪುರುಷನಪಟ್ಟಾಭಿಷೇಕವಾದ ಸಂಗತಿಯನ್ನು ಉಲ್ಲೇಖಿಸಿರುತ್ತದೆ.ಬಾರದೂರು ಗ್ರಾಮದಶಾಸನವು ಕೃಷ್ಣರಾಜನಗರ ತಾಲೋಕು ಪ್ರದೇಶದ ಪ್ರಾಚೀನ ಶಾಸನವಾಗಿದೆ.ಈ ಶಾಸನದಲ್ಲಿ ಶ್ರೀಪುರುಷನ ಪಟ್ಟಾಭಿಷೇಕವಾದ ವರ್ಷವುಕ್ರಿ.ಶ 925ಎಂದು ಸೂಚಿಸುತ್ತದೆ.ಇದರ ಜೊತೆಗೆ ಗಂಗರ ವಂಶಾವಳಿಯನ್ನು ತಿಳಿಯಲು ಇದು ಸಹಾಯವಾಗಿದೆ.[8] ಶ್ರೀಪುರುಷನು ತನ್ನ ಆಡಳಿತದ ಕೊನೆಯತನಕ ರಾಷ್ಟ್ರಕೂಟರಿಗೆ ತಲೆಬಾಗದೆ62 ವರ್ಷಗಖ ಕಾಲ ರಾಜ್ಯವಾಳಿದನು.

ಶ್ರೀಪುರುಷನುಕ್ರಿ.ಶ. 788ರಲ್ಲಿ ಮರಣ ಹೊಂದಿದನು.ಅನಂತರ 2ನೇಶಿವಮಾರ ಅಧಿಕಾರಕ್ಕೆ ಬಂದನು.ಈ ಸಂದರ್ಭದಲ್ಲಿ ಶ್ರೀಪುರುಷನ ಮಗನಾದ ದುಗ್ಗಮಾರನು ಶಿವಮಾರನನ್ನು ಧಿಕ್ಕರಿಸಿ ಹೋರಾಟಕ್ಕೆ ನಿಂತನು.ನೊಳಂಬ ಸಿಂಹವೋತನು 2ನೇ ಶಿವಮಾರನಿಗೆ ಸಹಾಯ ಮಾಡಿದನು.ಇದರಿಂದ ದುಗ್ಗಮಾರನು ಪರಾಜಿತನಾದನು.2ನೇಶಿವಮಾರನ ಮಗನಾದ 1ನೇ ರಾಚಮಲ್ಲನು ಕ್ರಿ.ಶ. 819ರಲ್ಲಿ ಸಾಲಿಗ್ರಾಮದಲ್ಲಿ ಬರೆಸಿದತಾಮ್ರಶಾಸನದಲ್ಲಿ ಇಮ್ಮಡಿ ಶಿವಮಾರನನ್ನು **'ಕೂಜ್ಞಾಗಣೆ ಮಹಾರಾಜಾಧಿರಾಜ'**ನೆಂದು ಬರೆದಿದೆ.[9] ಇವನು ತನ್ನ ತಂದೆಯ ಕಾಲದಲ್ಲಿ ಕುಣಿಗಾಲು ನಾಡನ್ನು ಆಳುತಿದ್ದು, ತಂದೆಯ ಜೊತೆಯಲ್ಲಿ ರಾಷ್ಟ್ರಕೂಡರ ಮೇಲೆ ವಿರುದ್ಧ ನಡೆದ ಯುದ್ದದಲ್ಲಿ ಭಾಗವಹಿಸಿದ್ದನು.ಇವನ ಆಳ್ವಿಕೆಯ 3ನೇ ವರ್ಷವನ್ನು ನವಿಲೆ ಶಾಸನದಲ್ಲಿ ಬಾಣರು ಗಂಗರ ಮೇಲೆ ದಂಡೆತ್ತಿ ಬಂದರೆಂದು ತಿಳಿಸುತ್ತದೆ.ಇವನ ಕಾಲದಲ್ಲಿ ರಾಷ್ಟ್ರಕೂಟರ ಮತ್ತು ಗಂಗರಿಗೂ ಯುದ್ಧಗಳು ಮುಂದುವರಿದವು.

ರಾಷ್ಟ್ರಕೂಟರ ಸೈನ್ಯ ಗಂಗವಾಡಿಗೆ ಬಂದಾಗ ಶಿವಮಾರನು ಮುದುಗುಂಡೂರಿನಲ್ಲಿಸೋಲಿಸಿದನೆಂದು ಗಂಗರ ಶಾಸನವೊಂದು ತಿಳಿಸುತ್ತದೆ.[10] ಆದರೆ ರಾಷ್ಟ್ರಕೂಟರ

ಶಾಸನದಲ್ಲಿ ಶಿವಮಾರನನ್ನು ಸೋಲಿಸಿ ಸೆರೆಹಿಡಿದರು.ರಾಷ್ಟ್ರಕೂಟರರಾಜ ದ್ರುವನು ತನ್ನ ಮಗ ಸ್ತಂಭವನ್ನು ಗಂಗರಾಜ್ಯದ ರಾಜ್ಯಪಾಲನಾಗಿ ನೇಮಿಸಿದನು. ಈ ಸಂದರ್ಭದಲ್ಲಿ ದ್ರುವನು ಮರಣ ಹೊಂದಿದ್ದರಿಂದ ಸಿಂಹಾಸನಕ್ಕಾಗಿ ಸ್ತಂಭ ಮತ್ತು ಮುಮ್ಮಡಿ ಗೋವಿಂದನ ನಡುವೆ ಕಲಹಉಂಟಾಯಿತು.ಈ ಸಂದರ್ಭದಲ್ಲಿ ರಾಷ್ಟ್ರಕೂಟರ ಚಕ್ರವರ್ತಿಯಾದ ಮೇಲೆ ಸಾಮಂತರಾಜರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಶಿವಮಾರನನ್ನು ಕಾರಗೃಹದಿಂದ ಬಿಡುಗಡೆ ಮಾಡಿದನು.ಆದರೆ, ಶಿವಮಾರನು ಸ್ತಂಭನ ಸಹಾಯ ಪಡೆದು ಸ್ವಾತಂತ್ರ್ಯನಾಗಲು ಪ್ರಯತ್ನಿಸಿದನು.ಇದರಿಂದ ಕೋಪಗೊಂಡ 3ನೇ ಗೋವಿಂದನು ಗಂಗವಾಡಿಯ ಮೇಲೆ ದಂಡೆತ್ತಿ ಬಂದು ಶಿವಮಾರನನ್ನುಸೋಲಿಸಿ ಸೆರೆಹಿಡಿದನು.ಆಗ ಶಿವಮಾರನ ಮಗ ಮಾರಸಿಂಹನು ಯುವರಾಜನಾಗಿಗಂಗವಾಡಿಯನ್ನು ಆಳುತ್ತಿದ್ದನೆಂದು 797–79ರ ಶಾಸನಗಳಿಂದ ತಿಳಿಯುತ್ತದೆ.ಆದರೆ 3ನೇಗೋವಿಂದನು ಉದಾರ ಮನಸ್ಸಿನಿಂದ ಸ್ತಂಭನನ್ನ ಮತ್ತೇ ಗಂಗವಾಡಿಯ ಪ್ರಾಂತ್ಯಾಧಿಕಾರಿಯಾಗಿನೇಮಿಸಿದನು. [11] ಗೋವಿಂದನು ಶಿವಮಾರನನ್ನು ಬಿಡುಗಡೆ ಮಾಡಿದನು.ಈ ಸಂದರ್ಭದಲ್ಲಿ ಯುವರಾಜ ಮಾರಸಿಂಹನು ಮರಣ ಹೊಂದಿದ್ದರಿಂದ ತನ್ನ ಸಹೋದರ ವಿಜಯಾದಿತ್ಯನನ್ನುಯುವರಾಜನಾಗಿ ನೇಮಿಸಿ ಗೋವಿಂದನ ಮರಣದ ಅನಂತರ ಆಮೋಘ ವರ್ಷನೊಡನೆ ಯುದ್ಧವನ್ನು ಕೈಗೊಂಡು ಕ್ರಿ.ಶ. 816ರಲ್ಲಿ ಕಾಗೆಮೊಗೆಯೂರಿನಲ್ಲಿ ಮರಣ ಹೊಂದಿದ್ದನು.ಶಿವಮಾರನು ತನ್ನ ಜೀವಿತಾವಧಿಯಲ್ಲಿ ಹೆಚ್ಚುಕಾಲ ರಾಷ್ಟ್ರಕೂಟರ ಕಾರಗೃಹದಲ್ಲಿ ಕಳೆದನು.

ಒಂದನೇ ಶಿವಮಾರನ 2ನೇ ಮಗ ಪೃಥ್ವಿಯು ಇನ್ನುಬಾಲಕನಾಗಿದ್ದರಿಂದ ತನ್ನ ಸಿಂಹಾಸನವನ್ನು ತನ್ನ ತಮ್ಮ ವಿಜಯಾಧಿತ್ಯನಿಗೆ ವಹಿಸಿಕೊಟ್ಟನು.ಆದರೆ ಅವನು ತನಗೆ ರಾಜತ್ವ ಬೇಡವೆಂದು ತನ್ನ ಮಗನಾದ 1ನೇ ರಾಚಮಲ್ಲನಿಗೆ 816ರಲ್ಲಿ ಪಟ್ಟಕಟ್ಟಿದನು.ಇವನು ಅಧಿಕಾರಕ್ಕೆ ಬಂದ ತಕ್ಷಣ ನೊಳಂಬದವರ ಜೊತೆ ಸ್ನೇಹ ಸಂಪಾದಿಸಿ ರಾಷ್ಟ್ರಕೂಟರ ವಿರುದ್ಧ ಹೋರಾಟ ಮುಂದುವರಿಸಿದನು.ಇವನು ತನ್ನ ಮಗಳು ಜಾಯಬ್ಬೆಯನ್ನುನೋಂಬರಾಜ ಪೊಳಲ್ಚೋರನಿಗೆ ವಿವಾಹ ಮಾಡಿಕೊಟ್ಟನು.1ನೇ ರಾಚಮಲ್ಲನು ಕ್ರಿ.ಶ. 819ಜೂನ್ 26ರಂದು ಸಾಲಿಗ್ರಾಮದಲ್ಲಿ ಬರೆಸಿದ ತಾಮ್ರಪಟಲದ ದಾನಶಾಸನದಲ್ಲಿ ಅವನ ಆಳ್ವಿಕೆಯಮೊದಲ ವರ್ಷವನ್ನು ತಿಳಿಸುತ್ತದೆ.

ರಾಷ್ಟ್ರಕೂಟರ ರಾಜ ಆಮೋಘವರ್ಷನು ತನ್ನ ರಾಜ್ಯಪಾಲನಾದ ಬಂಕೇಶನ ನೇತೃತ್ವದಲ್ಲಿ ಒಂದುಸೈನ್ಯವನ್ನು ಗಂಗವಾಡಿಗೆ ಕಳುಹಿಸಿದನು. ರಾಚಮಲ್ಲನು ಮೊದಮೊದಲು ಜಯಶಾಲಿಯಾದರು.ಯುದ್ಧವನ್ನುಗೆಲ್ಲಲು ಸಾಧ್ಯವಾಗಲಿಲ್ಲ. ಆದರೆ, ಗಂಗರ ಶಾಸನಗಳಲ್ಲಿ ವಿಷ್ಣುವಹಾವರ್ತಾವನ್ನು ತಾಳಿ ರಾಚಮಲ್ಲನು ಬಹಳ ಕಾಲ ರಾಷ್ಟ್ರಕೂಟರ ವಶದಲ್ಲಿದ್ದ ಗಂಗರಾಜ್ಯವನ್ನು ಪಡೆದುಕೊಂಡನು ಎಂದಿದೆ.ಇದಕ್ಕೆ ವಿರುದ್ಧವಾದ ಹೇಳಿಕೆಗಳು ಇದೇ ರಾಷ್ಟ್ರಕೂಡ ಶಾಸನಗಳಲ್ಲಿ

ದೊರೆಯುತ್ತವೆ. [12] ರಾಚಮಲ್ಲನು ಕ್ರಿ.ಶ. 843ರಲ್ಲಿ ಮರಣ ಹೊಂದಿದ ಅನಂತರ ಮಗ ನೀತಿಮಾರ್ಗ ಎರೆಗಂಗರಾಜನಾದನು.

ಒಂದನೇ ರಾಚಮಲ್ಲನ ಮಗನಾದ ಒಂದನೇನೀತಿಮಾರ್ಗ ಎರಗಂಗನು ಕ್ರಿ.ಶ. 843ರಲ್ಲಿ ರಾಜನಾದನು.ಇವರು ಕೂಡ ರಾಷ್ಟ್ರಕೂಟರಿಂದ ಸಾತಂತ್ರ್ಯರಾಗಲು ಪ್ರಯತ್ನಿಸಿದನು.ಅಮೋಘವರ್ಷನು ತನ್ನ ಸೈನಾಧಿಪತಿ ಬಂಕೇಶನನ್ನುನೀತಿಮಾರ್ಗನ ಮೇಲೆ ಯುದ್ಧ ಮಾಡಲು ಕಳುಹಿಸಿದನು.ಈ ಸಂದರ್ಭದಲ್ಲಿ 1ನೇನೀತಿಮಾರ್ಗನು ರಾಷ್ಟ್ರಕೂಟರ ಸೈನ್ಯದ ವಿರುದ್ಧ ವೀರಾವೇಷದಿಂದಲೇ ಹೋರಾಡಿ ರಾಜ ಕಾಮುಡುಎಂಬಲ್ಲಿ ವಿಜಯಗಳಿಸಿದನು.ಇದರಿಂದ ನೀತಿಮಾರ್ಗನ ಸ್ನೇಹಗಳಿಸಲು ಅಮೋಘವರ್ಷನು ತನ್ನಮಗಳು ಚಂದ್ರಳಬಬ್ಬೆಯನ್ನು ನೀತಿಮಾರ್ಗ ಮಗನಾದ ಭೂತಗನಿಗೆ ಕೊಟ್ಟು ವಿವಾಹಮಾಡಿಸಿದನು.ಇದರಿಂದ ಗಂಗರು ಮತ್ತು ರಾಷ್ಟ್ರಕೂಟರ ನಡುವೆ ಇದ್ದ ವೈರತ್ವ ಕೊನೆಗೊಂಡಿತು.ಅನಂತರ ಗಂಗರ ರಾಜ್ಯವನ್ನು ಸುಭದ್ರವಾಗಿ ಕಾಪಾಡಿಕೊಂಡನು.ಸಗಳಿಕೆಕೆರೆಯಲ್ಲಿ ದೊರೆತಿರುವ 1ನೇ ನೀತಿಮಾರ್ಗ ಎರೆಗಂಗನ ತಾಮ್ರ ಶಾಸನದಲ್ಲಿ ಒಂದನೇಶಿವಮಾರನನ್ನು ಕೊಙುಣಿ ಮಹಾರಾಜಾಧಿರಾಜನೆಂದು, ಗಂಗ ಅರಸನಾದ ಇಮ್ಮಡಿಶಿವಕುಮಾರನ ತಮ್ಮನಾದ ವಿಜಯಾದಿತ್ಯನ ಮಗ ರಣವಿಕ್ರಮನು ಕೊಳನೆಲ್ಲೂರು ಗ್ರಾಮವನ್ನು ದತ್ತಿ ಬಿಟ್ಟನೆಂದು ತಿಳಿಸುತ್ತದೆ. ಇದಕ್ಕೆ ಸರಿಯಾದ ಆಧಾರಗಳಿಲ್ಲದ್ದರಿಂದ ಮತ್ತು ಬೇರೆ ಶಾಸನಗಳಲ್ಲಿ ಈ ವಿಷಯವು ಪ್ರಸ್ತಾಪವಾಗಿಲ್ಲದ್ದರಿಂದ ಇದನ್ನು ಗಂಗರ ಕೂಟ ಶಾಸನಗಳಲ್ಲಿ ಒಂದು ಎಂದುಪರಿಗಣಿಸಲಾಗಿದೆ.[13]

ಒಂದನೇ ನೀತಿಮಾರ್ಗನಿಗೆ 2ನೇ ರಾಚಮಲ್ಲ ಮತ್ತುಭೂತುಗರೆಂಬ ಇಬ್ಬರು ಮಕ್ಕಳಿದ್ದರು.ಗಂಗರಾಜ ಮರಣಹೊಂದಿದ ಅನಂತರ ಅವನ ಹಿರಿಯ ಮಗ 2ನೇ ರಾಚಮಲ್ಲ ಕ್ರಿ.ಶ. 870ರಲ್ಲಿ ಗಂಗರ ದೊರೆಯಾದನು.ರಾಚಮಲ್ಲನು ಗಂಗರರಾಜನಾದ ಅನಂತರ ಅವನ ಸಹೋದರ ಭೂತುಗನನ್ನು ಯವರಾಜನಾಗಿ ಮಾಡಿಕೊಂಡನು.ಇವರು ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಇಮ್ಮಡಿ ಮಾರಸಿಂಹನ ಮಗನಾದ ನನ್ನಿಯ ಗಂಗನುಗಂಗ ರಾಜ್ಯಕ್ಕೆ ನಾವೇ ನಿಜವಾದ ಹಕ್ಕುದಾರನೆಂದು ಹೇಳಿಕೊಂಡು ಬಾಣರು ಮತ್ತು ವೈಡುಂಬರಸಹಾಯದಿಂದ ಗಂಗರಾಜನ ಮೇಲೆ ದಂಗೆ ಎದ್ದನು.ಈ ಯುದ್ಧದಲ್ಲಿ ಮೊದಲು ಶತ್ರು ಸೈನ್ಯಯಶಸ್ಸುಗಳಿಸುತ್ತಾ ಪುರಿನಾಡು ಗಂಗವಾಡಿ 6000ರ ಅನೇಕ ಭಾಗಗಳನ್ನು ಮತ್ತು ಮಣ್ಣೆ 200ಸಹ ಬಾಣರ ವಶವಾದವು.ಈ ಸಂದರ್ಭದಲ್ಲಿ ನೊಳಂಬವಾಡಿಯ ಮಹೇಂದ್ರನು 2ನೇರಾಚಮಲ್ಲನ್ನು ಬೆಂಬಲಿಸಿ ಕ್ರಿ.ಶ. 842ರಲ್ಲಿ ಶತ್ರು ಸೈನ್ಯವನ್ನು ಸೋಲಿಸಿದನು.ಇದರಿಂದಗಂಗರಾಜ್ಯ 2ನೇ ರಾಚಮಲ್ಲನಲ್ಲಿ ಉಳಿಯಿತು. [14] ಆದರೆ ಮಹೇಂದ್ರನ ಅಭಿಲಾಷೆಯು ಭಿನ್ನವಾಗಿದ್ದು, ಗಂಗರಿಂದ ಸ್ವಾತಂತ್ರರಾಗಲು ಅವರೊಡನೆ ಯುದ್ದಕ್ಕೆ ಸಿದ್ಧನಾದನು.ಗಂಗರುಮತ್ತು ಮಹೇಂದ್ರನ ನಡುವೆ ಯುದ್ಧ ನಡೆಯಿತು.ಹಿರಿಯೂರು, ಸೂಳೂರು

ಮತ್ತುಸವಿಯೂರುಗಳಲ್ಲಿ ಬೂತುಗನು ಮಹೇಂದ್ರನನ್ನು ಸೋಲಿಸಿದನು.ಆದರೆ, ಗಂಗಸೇನಾಧಿಪತಿಯಾದ ರಾಜೇಯಗಂಗ ಹತನಾದನು.ಇದರಿಂದ ಕೋಪಗೊಂಡ ಬೂತುಗನ ಮಗಎರೆಯಪ್ಪ ಕ್ರಿ.ಶ. 895ರಲ್ಲಿ ಮಹೇಂದ್ರನನ್ನು ಸೋಲಿಸಿ ತೊಂಬು ನೋಳಂಬರಾಜ್ಯದ ಪ್ರಮುಖ ನಗರಗಳನ್ನು ವಶಪಡಿಸಿಕೊಂಡನು.[15]

2ನೇ ರಾಚಮಲ್ಲನಿಗೆ ಮಕ್ಕಳಿಲ್ಲವಾದ್ದರಿಂದ ಬೂತೂಗನ ಮಗನಾದ ಎರೆಯಪ್ಪನನ್ನುಯುವರಾಜನಾಗಿ ನೇಮಿಸಿದನು.ಇವರು 2ನೇ ರಾಚಮಲ್ಲ ಮರಣ ಹೊಂದಿನ ಅನಂತರ ಕ್ರಿ.ಶ.907ರಲ್ಲಿ 2ನೇ ನೀತಿಮಾರ್ಗ ಗಂಗರಾಜನಾದನು.ಇವನಿಗೆ ನರಸಿಂಹ, ರಾಚಮಲ್ಲ ಋಋಋಮಕ್ಕಳಿದ್ದರು ಇವನು ಇಮ್ಮಡಿ ಬೂತುಗನ ಮಗನಾದ ಎರೆಯಪ್ಪನನ್ನು ಯುವರಾಜನಾಗಿನೇಮಿಸಿದನು.ಇವನು ಮರಣ ಹೊಂದಿನ ಅನಂತರ ಅವನ ಮಗ ನರಸಿಂಹ 921 ರಿಂದ933ರವರೆಗೆ ಆಡಳಿತ ನಡೆಸಿದನು.ಇವರ ಮರಣದ ಅನಂತರ 3ನೇ ರಾಮಚಲ್ಲ 933 ರಿಂದ938ರವರೆಗೆ ಆಡಳಿತ ನಡೆಸಿದನು.ಇವರು ಅಸಮರ್ಥನಾಗಿದ್ದರಿಂದ ಇವರ ಸಹೋದರಇಮ್ಮಡಿ ಭೂತುಗ ಅಣ್ಣ ರಾಮಚಲ್ಲನನ್ನು ಪದಚ್ಯುತಿಗೊಳಿಸಿ ಅಧಿಕಾರಕ್ಕೆ ಬಂದನು.

ಇಮ್ಮಡಿ ನೀತಿಮಾರ್ಗನ ಕೊನೆಯ ಮಗನಾದ ಇಮ್ಮಡಿಬೂತೂಗ ರಾಷ್ಟ್ರಕೂಟರ 3ನೇ ಕೃಷ್ಣನ ಸಹಾಯದಿಂದ ತನ್ನ ಸಹೋದರನ್ನು ಪದಚ್ಯುತಿಗೊಳಿಸಿಗಂಗರಾಜನಾದನು.ಇವರು ವೀರಯೋಧನಾಗಿದ್ದು ರಾಷ್ಟ್ರಕೂಟರ ಯುದ್ಧಗಳಲ್ಲಿ ಅವನಿಗೆ ಬೆಂಬಲಿಸಿದನು.ರಾಷ್ಟ್ರಕೂಟರು ಚೋಳರ ಮೇಲೆ ಯುದ್ಧ ಕೈಗೊಂಡಾಗ ಇಮ್ಮಡಿ ಬೂತುಗನುಪಾಲ್ಗೊಂಡು ಚೋಳ ರಾಜಧಾನಿ ತಂಜಾವೂರನ್ನು ಸೂರೆ ಮಾಡಲು ಮತ್ತು ಚೋಳರಾಜಾಧಿತ್ಯವನ್ನು 949ರಲ್ಲಿ ಕೊಲ್ಲಲು ಸಹಾಯ ಮಾಡಿದನು.ಇದಕ್ಕೆ ಪ್ರತಿಫಲವಾಗಿ 3ನೇ ಕೃಷ್ಣನು ಬನವಾಸಿಯ ಪ್ರಾಂತ್ಯವನ್ನು ಭೂತುಗನಿಗೆ ಬಿಟ್ಟುಕೊಟ್ಟನು. [16] ಬೂತುಗನುವೀರಯೋದನು ಮಾತ್ರವಲ್ಲದೆ ಕಲೆ, ಸಾಹಿತ್ಯವನ್ನು ಪ್ರೋತ್ಸಾಹಿಸಿ ವಿದ್ವಾಂಸರಿಗೆ ಆಶ್ರಯನೀಡಿದನು.ಅನೇಕ ದತ್ತಿಗಳನ್ನು ಧಾರ್ಮಿಕ ಸಂಸ್ಥೆಗಳಿಗೆ ನೀಡಿದನು.ಇವನಿಗೆ ಮರಳ,ಮಾರಸಿಂಹ ಮತ್ತು ಗೋವಿಂದರಸ ಎಂಬ ಮಕ್ಕಳಿದ್ದರು.

ಇಮ್ಮಡಿ ಬೂತುಗನ ಅನಂತರ ಮರುಳನು ಅಧಿಕಾರಕ್ಕೆ ಬಂದು ಕೇವಲ 3 ವರ್ಷಗಳ ಕಾಲ ಅಧಿಕಾರದಲ್ಲಿದ್ದನು.ಇವರ ಅನಂತರ ಸಹೋದರ ಇಮ್ಮಡಿ ಮಾರಸಿಂಹನು ರಾಜನಾಗಿಕ್ರಿ.ಶ. 963 ರಿಂದ 974ರ ವರೆಗೆ ರಾಜ್ಯವಾಳಿದನು.ಇವರೇ ಗಂಗರ ಕೊನೆಯ ಪ್ರಸಿದ್ಧ ದೊರೆ.ಮಾರಸಿಂಹನಿಗೆ ಸತ್ಯವಾಕ್ಯ, 4ನೇ ರಾಚಮಲ್ಲ, ರಕ್ಕಸಗಂಗ ಮತ್ತು ಅರುಮೋಳಿದೇವ ಎಂಬ 4ಜನ ಮಕ್ಕಳಿದ್ದರು.ಮಾರಸಿಂಹನ ಮರಣದ ಅನಂತರ ಅವನ ಮಕ್ಕಳಲ್ಲಿ ಸಿಂಹಾಸನಕ್ಕಾಗಿ ಅಂತರ್‌ಕಲಹನಡೆಯುತ್ತಿತ್ತು.ಈ ಸಂದರ್ಭವನ್ನು ಉಪಯೋಗಿಸಿಕೊಂಡ ಚಾಲುಕ್ಯ ದೊರೆ ಇಮ್ಮಡಿ ತೈಲಪರಾಜಕುಮಾರರೆಲ್ಲರನ್ನು ಸೋಲಿಸಿ ಗಂಗವಾಡಿಯನ್ನು ತನ್ನ ಸಾಮ್ರಾಜ್ಯದಲ್ಲೇ ವಿಲೀನಗೊಳಿಸಿಕೊಂಡನು.[17] ಆದರು 4ನೇ ರಾಚಮಲ್ಲ ಕ್ರಿ.ಶ.

999ರವರೆಗೆ ಸಣ್ಣ ಪ್ರದೇಶದಲ್ಲಿ ರಾಜನಾಗಿಆಳಿದನು.ಇವರ ಅನಂತರ ಸಹೋದರ ರಕ್ಕಸಗಂಗನು ಕ್ರಿ.ಶ. 1024ರವರೆಗೆ ಆಡಳಿತ ನಡೆಸಿದನು.ಆದರೆ, ಇವನ ಅಧಿಕಾರದ ಅವಧಿಯಲ್ಲಿ ಚೋಳರು 1004ರಲ್ಲಿ ತಲಕಾಡನ್ನು ವಶಪಡಿಸಿಕೊಂಡರು.ಕ್ರಿ.ಶ. 1014ರಲ್ಲಿ ರಕ್ಕಸಗಂಗನ ಶಾಸನವು ರಾಜೇಂದ್ರ ಚೋಳನನ್ನುಅಧಿಪತಿಯೆಂದು ಉಲ್ಲೇಖಿಸುತ್ತದೆ.ಅನಂತರ ಗಂಗರ ಆಳ್ವಿಕೆ ಕೊನೆಗೊಂಡಿತು.[18]ಹೀಗೆ, ಪ್ರಸ್ತುತ ಲೇಖನವನ್ನು ಇದೇ ಕೃಷ್ಣರಾಜನಗರ ತಾಲೋಕು ಪ್ರದೇಶದಲ್ಲಿಕಂಡುಬರುವ ಗಂಗರ ಕಾಲದ ಶಾಸನಗಳಿಂದಲೇ ಅವರ ಆಳ್ವಿಕೆಯನ್ನು ಸ್ಥೂಲವಾಗಿಯೇ ದಾಖಲಿಸಲು ಹೆಚ್ಚು ಸಹಾಯಕವೇ ಆಗಿರುತ್ತದೆ ಎಂದು ಹೇಳಬಹುದು.

## ಕೊನೆಯ ಟಿಪ್ಪಣಿ

1ಡಾ. ಎನ್.ಎನ್. ಚಿಕ್ಕಮಾದು, ಮೈಸೂರು ತಾಲೂಕು ಗ್ಯಾಸೆಟಿಯರ್, 2011, ಪುಟ –17

2ಡಾ. ಸೂರ್ಯನಾಥ ಕಾಮತ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ– 1, 1984, ಪುಟ –169

3ಅದೇ, ಪುಟ –34

4ಎಫಿಗ್ರಾಫಿಯ ಕರ್ನಾಟಿಕ, ಸಂಪುಟ–05, ಕೃಷ್ಣರಾಜನಗರ ತಾಲೋಕು,ಶಾಸನ ಸಂಖ್ಯೆ–103, ಪುಟ–237– 238

5ಮೈಸೂರು ವಿಶ್ವವಿದ್ಯಾನಿಲಯ, ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, 2009, ಪುಟ –302

6ಪ್ರೊ. ಬಿ.ಷೇಕ್‌ಅಲಿ, ಕರ್ನಾಟಕ ಚರಿತ್ರೆ – ಸಂಪುಟ–1, 2018, ಪುಟ – 462

7ಆರ್.ಆರ್. ದಿವಾಕರ್, ಕರ್ನಾಟಕ ಪರಂಪರೆ, ಸಂಪುಟ–1, 1992, ಪುಟ –142

8ಎಪಿಗ್ರಾಫಿಯ ಕರ್ನಾಟಿಕ, ಸಂಪುಟ– 05,ಕೃಷ್ಣರಾಜನಗರ ತಾಲೋಕು, ಶಾಸನ ಸಂಖ್ಯೆ–48, ಪುಟ–44, 45, 46

9ಅದೇ, ಶಾಸನ ಸಂಖ್ಯೆ– 49, ಪುಟ –49

10ಮೈಸೂರು ವಿಶ್ವವಿದ್ಯಾನಿಲಯ, ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, 2009, ಪುಟ – 304

[11]ಡಾ. ಸೂರ್ಯನಾಥ ಕಾಮತ್, ಕರ್ನಾಟಕ ಗ್ಯಾಸೆಟಿಯರ್, ಭಾಗ– 1, 1984, ಪುಟ – 173

[12]ಮೈಸೂರು ವಿಶ್ವವಿದ್ಯಾನಿಲಯ, ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, 2009, ಪುಟ – 304

[13]ಎಪಿಗ್ರಾಫಿಯ ಕರ್ನಾಟಕ, ಸಂಪುಟ–05,ಕೃಷ್ಣರಾಜನಗರ ತಾಲೋಕು,ಶಾಸನ ಸಂಖ್ಯೆ–105, 1984, ಪುಟಗಳು –99, 100, 101, 102

[14]ಡಾ. ಸೂರ್ಯನಾಥ ಕಾಮತ್ ಕರ್ನಾಟಕ ಗ್ಯಾಸೆಟಿಯರ್, ಭಾಗ–1, 1984, ಪುಟ – 174

[15]ಭಾರತದ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಮೈಸೂರು ಜಿಲ್ಲೆ, 1988, ಪುಟ – 55

[16]ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ, ಸಂಪುಟ–7, 1999, ಪುಟ – 237

[17]ಡಾ. ಸೂರ್ಯನಾಥ ಕಾಮತ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ– 1, 1984, ಪುಟ – 175

[18]ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ, ಸಂಪುಟ– 7, 1999, ಪುಟ – 238